ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಜ್ಞಾನಸಂಗಮ ಆವರಣ, ಬೆಳಗಾವಿ-೫೯೦೦೧೮, ಕರ್ನಾಟಕ ರಾಜ್ಯ

ದೂರವಾಣಿ: ೦೮೩೧-೨೪೯೮೧೦೦
ಕುಲಸಚಿವರು
ಫ್ಯಾಕ್ಸ್: ೦೮೩೧-೨೪೦೫೪೬೭

ಉಲ್ಲೇಖ ಸಂಖ್ಯೆ/ವಿತಾವಿ/ಆಡಳಿತ/೨೦೨೦-೨೧/ 5183 ದಿನಾಂಕ: - 7 JAN 2021

## ಸುತ್ತೋಲೆ

**ವಿಷಯ:** **"ಸಾಂಸ್ಕೃತಿಕ ಕನ್ನಡ"** ಮತ್ತು **"ಬಳಕೆ ಕನ್ನಡ"** ಪಠ್ಯಪುಸ್ತಕಗಳ ಅಳವಡಿಕೆ, ಬೋಧನಾ ಮತ್ತು ಪರೀಕ್ಷಾ ಪದ್ಧತಿಗೆ ಸಂಬಂಧಿಸಿದಂತೆ ಹಾಗೂ ಸದರಿ ಪಠ್ಯಪುಸ್ತಕಗಳನ್ನು ಕಳುಹಿಸಿಕೊಡುತ್ತಿರುವ ಕುರಿತು.

ಕರ್ನಾಟಕ ಸರ್ಕಾರದಿಂದ ರಚಿಸಲ್ಪಟ್ಟ ಕಡ್ಡಾಯ ಕನ್ನಡ ಭಾಷಾ ಬೋಧನೆ ಅನುಷ್ಠಾನ ಸಮಿತಿ ಮತ್ತು ಮಾನ್ಯ ಕುಲಪತಿಗಳಾದ ಪ್ರೊ ಕರಿಸಿದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ಸರ್ಕಾರದ ತಾಂತ್ರಿಕ ಶಿಕ್ಷಣ ಪಠ್ಯಪುಸ್ತಕ ರಚನಾ ಸಮಿತಿಯವರು ನೀಡಿದ ಸಲಹೆಯಂತೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಕನ್ನಡ ಭಾಷಾ ಬೋಧನೆಯ ಸಂಬಂಧ **ಸಾಂಸ್ಕೃತಿಕ ಕನ್ನಡ** ಮತ್ತು **ಬಳಕೆ ಕನ್ನಡ** ಪಠ್ಯಪುಸ್ತಕಗಳನ್ನು ಸಿದ್ಧಪಡಿಸಲಾಗಿರುತ್ತದೆ.

**ಪಠ್ಯಪುಸ್ತಕಗಳ ಅಳವಡಿಕೆ** :

ವಿಶ್ವವಿದ್ಯಾಲಯದ ಕನ್ನಡ ಮಾತೃಭಾಷೆಯ ವಿದ್ಯಾರ್ಥಿಗಳಿಗೆ ಅಂದರೆ ಯಾರು 10ನೇ ತರಗತಿಯವರೆಗೆ ಕನ್ನಡ ಭಾಷೆಯನ್ನು ಅಧ್ಯಯನ ಮಾಡಿರುತ್ತಾರೆ ಅಂತಹ ವಿದ್ಯಾರ್ಥಿಗಳಿಗೆ ಪ್ರಸ್ತುತ 2020 - **21ನೇ ಶೈಕ್ಷಣಿಕ ವರ್ಷದಿಂದಲೇ ಆಡಳಿತ ಕನ್ನಡ** ಪಠ್ಯಪುಸ್ತಕಕ್ಕೆ ಬದಲಾಗಿ **"ಸಾಂಸ್ಕೃತಿಕ ಕನ್ನಡ"** ಎಂಬ ಪಠ್ಯವನ್ನು ಬೋಧನೆ ಮಾಡಬೇಕು ಮತ್ತು ಹೊರರಾಜ್ಯದ/ ವಿದೇಶಿ ವಿದ್ಯಾರ್ಥಿಗಳು 10ನೇ ತರಗತಿಯವರೆಗೆ ಕನ್ನಡ ಭಾಷೆಯನ್ನು ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿಲ್ಲದ (ಸಿಬಿಎಸ್ಸಿ, ಐಸಿಎಸ್ಸಿ, ಕೇಂದ್ರೀಯ ವಿದ್ಯಾಲಯಗಳು, ನವೋದಯ ವಿದ್ಯಾಲಯಗಳಲ್ಲಿ, ಆಂಗ್ಲಭಾಷೆ / ಕನ್ನಡೇತರ ಭಾಷಾ ಮಾಧ್ಯಮದಲ್ಲಿ / ಎಲ್ಲಾ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯನ್ನು ಕಲಿಸಲು ಹಿಂದಿನ **"ವ್ಯಾವಹಾರಿಕ ಕನ್ನಡ"** ಪಠ್ಯಪುಸ್ತಕದ ಬದಲಾಗಿ ಪ್ರಸ್ತುತ **"ಬಳಕೆ ಕನ್ನಡ"** ಪಠ್ಯ ಪುಸ್ತಕವನ್ನು ಸಿದ್ಧಪಡಿಸಲಾಗಿರುತ್ತದೆ, ಪಠ್ಯಪುಸ್ತಕಗಳನ್ನು ಬೋಧನೆಗೆ ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು.

ಈ ಎರಡು ಪಠ್ಯಪುಸ್ತಕಗಳು ಎಲ್ಲಾ ಸಂಯೋಜಿತ ಕಾಲೇಜುಗಳು / ಸ್ವಾಯತ್ತ (ಆಟಾನಮಸ್) ಕಾಲೇಜುಗಳು / ಖಾಸಗಿ ವಿಶ್ವವಿದ್ಯಾಲಯಗಳು / ಡೀಮ್ಡ್ ವಿಶ್ವವಿದ್ಯಾಲಯಗಳಿಗೆ **ಅಧಿಕೃತ ಪಠ್ಯಪುಸ್ತಕಗಳಾಗಿದ್ದು ಬೋಧನೆಗೆ ಕಡ್ಡಾಯವಾಗಿ ಈ ಪುಸ್ತಕಗಳನ್ನು ಅಳವಡಿಸಿಕೊಳ್ಳಬೇಕೆಂದು** ಕರ್ನಾಟಕ ಸರ್ಕಾರದ ಆದೇಶದ ಅನುಸಾರ ನಿರ್ದೇಶಿಸುತ್ತದೆ.

**ಪಠ್ಯಪುಸ್ತಕಗಳ ಬೋಧನಾ ಪದ್ಧತಿ:**

ಈ ಎರಡು ಪಠ್ಯಪುಸ್ತಕಗಳು ಕಾರ್ಯಚಟುವಟಿಕೆ ಪಠ್ಯಪುಸ್ತಕಗಳು ಆಗಿದ್ದು, ಈ ಮೇಲೆ ತಿಳಿಸಿದಂತೆ ನಿರ್ದಿಷ್ಟ ವಿದ್ಯಾರ್ಥಿಗಳಿಗೆ ಸದರಿ ಪಠ್ಯಪುಸ್ತಕಗಳನ್ನು ಅಂದರೆ ಕನ್ನಡ ನಾಡು ನುಡಿ ಸಂಸ್ಕೃತಿ ಮತ್ತು ಸಾಹಿತ್ಯದ ಬೋಧನೆಯನ್ನು **ಸಾಂಸ್ಕೃತಿಕ ಕನ್ನಡ** ಪಠ್ಯಪುಸ್ತಕದ ಮುಖಾಂತರ ಬೋಧನೆ ಮಾಡಬೇಕು. ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯನ್ನು ಕಲಿಸಲು ಚಟುವಟಿಕೆಗಳ ಆಧಾರಿತ ಭಾಷಾ ಕಲಿಕೆಯನ್ನು **ಬಳಕೆ ಕನ್ನಡ** ಪಠ್ಯಪುಸ್ತಕದ ಮುಖಾಂತರ ಬೋಧನೆ ಮಾಡಬೇಕು.

**ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಿಗೆ 2018 ರ ಯೋಜನೆಯ ಪ್ರಕಾರ ನಿಗದಿಪಡಿಸಿದ ಪರೀಕ್ಷಾ ಮಾದರಿ :**

ಈಗಾಗಲೇ ಕನ್ನಡ ಭಾಷಾ ಬೋಧನೆಯು 2018ರ ಯೋಜನೆಯ ಪ್ರಕಾರ ಕ್ರೆಡಿಟ್ ಕೋರ್ಸ್ ಆಗಿರುತ್ತದೆ. ಮುಂದುವರೆದು, 2020 **ಮತ್ತು** 21ರ **ಶೈಕ್ಷಣಿಕ ವರ್ಷದಿಂದಲೇ** ಕನ್ನಡ ಭಾಷಾ ಬೋಧನೆಯ ಅನುಷ್ಠಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸೂಚನೆಯಂತೆ ಮೇಲಿನ ಎರಡು ಪಠ್ಯಪುಸ್ತಕಗಳಿಗೆ ಕಾಲೇಜು ಮಟ್ಟದ 100 **ಅಂಕಗಳ ಪರೀಕ್ಷೆಯು** (CIE) **ನಡೆಯುತ್ತದೆ.** ನಿರಂತರ ಆಂತರಿಕ ಮೌಲ್ಯಮಾಪನ (CIE) ಪ್ರಕ್ರಿಯೆಯನ್ನು **ವಿಶ್ವವಿದ್ಯಾಲಯದ** 2018 **ರ ಯೋಜನೆ ಮತ್ತು ಪಠ್ಯಕ್ರಮ ನಿಯಮಗಳ** ಅನುಸಾರ ಕಾಲೇಜು ಮಟ್ಟದಲ್ಲಿ 100 ಅಂಕಗಳಿಗೆ ನಡೆಸಬೇಕು. **ಆಡಳಿತ ಕನ್ನಡ** ಮತ್ತು **ವ್ಯಾವಹಾರಿಕ ಕನ್ನಡ** ಪಠ್ಯಪುಸ್ತಕಗಳಿಗೆ ಕಳೆದ ಎರಡು ವರ್ಷಗಳಿಂದ ನಡೆದುಕೊಂಡು ಬಂದಿರುವ ಪರೀಕ್ಷಾ ಮಾದರಿಯನ್ನೇ **ಸಾಂಸ್ಕೃತಿಕ ಕನ್ನಡ** ಮತ್ತು **ಬಳಕೆ ಕನ್ನಡ** ಪಠ್ಯಪುಸ್ತಕಗಳಿಗೆ ಅಳವಡಿಸಿಕೊಳ್ಳಬೇಕು. ಈ ವಿಷಯದಲ್ಲಿ ಯಾವುದೇ ಗೊಂದಲಕ್ಕೆ ಒಳಗಾಗಬಾರದು.

**ವಿಶ್ವವಿದ್ಯಾಲಯದ ಸ್ವಾಯತ್ತ (ಆಟಾನಮಸ್) ಕಾಲೇಜುಗಳು ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು / ಡೀಮ್ಡ್ ವಿಶ್ವವಿದ್ಯಾಲಯಗಳಿಗೆ 2020 – 21 ರ ಯೋಜನೆಯ ಪ್ರಕಾರ ಕಡ್ಡಾಯವಾಗಿ ನಿಗದಿಪಡಿಸಿದ ಪರೀಕ್ಷಾ ಮಾದರಿ:**

ಸ್ವಾಯತ್ತ (ಆಟಾನಮಸ್) ಕಾಲೇಜುಗಳು ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು / ಡೀಮ್ಡ್ ವಿಶ್ವವಿದ್ಯಾಲಯಗಳು 2020 – 21 ರ ಯೋಜನೆಯ ಪ್ರಕಾರ ತಮ್ಮ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಇಂಜಿನಿಯರಿಂಗ್ ವಿಷಯಗಳ ಪರೀಕ್ಷಾ ಮಾದರಿಯಂತೆ ವಿಶ್ವವಿದ್ಯಾಲಯದಿಂದ ಪ್ರಕಟಿತವಾದ **ಸಾಂಸ್ಕೃತಿಕ ಕನ್ನಡ** ಮತ್ತು **ಬಳಕೆ ಕನ್ನಡ** ಪಠ್ಯಪುಸ್ತಕಗಳನ್ನೇ ಒಂದು ಕ್ರೆಡಿಟ್ ಕೋರ್ಸ್ ಪುಸ್ತಕಗಳಾಗಿ ಬೋಧನೆಯಲ್ಲಿ ಅಳವಡಿಸಿಕೊಳ್ಳಬೇಕು. ವಿಶ್ವವಿದ್ಯಾಲಯದ ಮತ್ತು ತಮ್ಮ ಸಂಸ್ಥೆಗಳ ಪರೀಕ್ಷಾ ಮಾದರಿಯಂತೆ 100 **ಅಂಕಗಳಿಗೆ** ನಿರಂತರ ಆಂತರಿಕ ಮೌಲ್ಯಮಾಪನ (CIE) ಹಾಗೂ ಸೆಮಿಸ್ಟರ್ ಅಂತ್ಯದ ಪರೀಕ್ಷೆಯನ್ನು (SEE) **ಕಡ್ಡಾಯವಾಗಿ ಗುಣಮಟ್ಟದಲ್ಲಿ ವ್ಯತ್ಯಾಸವಿಲ್ಲದಂತೆ ನಡೆಸಬೇಕು.** ಸೆಮಿಸ್ಟರ್ ಅಂತ್ಯದ ನಂತರ ವಿಶ್ವವಿದ್ಯಾಲಯಕ್ಕೆ ನಿರಂತರ ಆಂತರಿಕ ಮೌಲ್ಯಮಾಪನ ಮತ್ತು ಸೆಮಿಸ್ಟರ್ ಅಂತ್ಯದ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಹಾಗೂ ತಾವು ಭಾಷಾ ಬೋಧನೆಗೆ ಕೈಗೊಂಡಿರುವ ಕ್ರಮಗಳು ಮತ್ತು ಸಂಪೂರ್ಣ ಅನುಸರಣ ವರದಿಯನ್ನು ಸಲ್ಲಿಸಬೇಕು. ತಾವು ಸಲ್ಲಿಸಿದ ವರದಿ, ಪ್ರಶ್ನೆಪತ್ರಿಕೆಗಳು ಮತ್ತು ಅವುಗಳ ಗುಣಮಟ್ಟ, ತಾವು ಬೋಧನೆಗೆ ಕೈಗೊಂಡಿರುವ ವಿಧಾನಗಳನ್ನು **ವಿಶ್ವವಿದ್ಯಾಲಯದ ಕನ್ನಡ ಭಾಷಾ ಬೋಧನೆಯ ಅನುಷ್ಠಾನ ಸಮಿತಿಯಿಂದ** ತನಿಖೆ ಮತ್ತು ವಿಮರ್ಶೆಗೆ ಒಳಪಡಿಸಲಾಗುವುದು.

**ಪಠ್ಯಪುಸ್ತಕಗಳ ಅಧ್ಯಯನಕ್ಕೆ ವಿದ್ಯಾರ್ಥಿಗಳ ವಿಂಗಡನೆಯ ವಿಧಾನ:**

ಕಾಲೇಜುಗಳಲ್ಲಿ ಪ್ರಾಂಶುಪಾಲರು / ವಿಭಾಗಾಧಿಕಾರಿಗಳು / ಸಂಬಂಧಪಟ್ಟ ಅಧಿಕಾರಿಗಳು ಈ ಮೇಲ್ಕಂಡ ಪಠ್ಯಪುಸ್ತಕಗಳಲ್ಲಿ ಯಾವ ವಿದ್ಯಾರ್ಥಿ ಯಾವ ಪಠ್ಯಪುಸ್ತಕವನ್ನು ಅಧ್ಯಯನ ಮಾಡಬೇಕು ಎಂಬುದನ್ನು ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸರ್ಕಾರದ ಆದೇಶದ ಅನುಸಾರ ವಿದ್ಯಾರ್ಥಿಯ **ಹತ್ತನೇ ತರಗತಿಯ ಅಂಕಪಟ್ಟಿಯನ್ನು** ಪರಿಶೀಲಿಸುವುದರ ಮುಖಾಂತರ ಸಾಂಸ್ಕೃತಿಕ ಕನ್ನಡ ಪಠ್ಯಪುಸ್ತಕವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳ ಪಟ್ಟಿ ಮತ್ತು ಬಳಕೆ ಕನ್ನಡ ಪಠ್ಯ ಪುಸ್ತಕವನ್ನು ಅಧ್ಯಯನ ಮಾಡಬೇಕಾಗಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಅಂಕಪಟ್ಟಿ / ದಾಖಲೆಗಳ ಆಧಾರದ ಮೇಲೆ ದೃಢೀಕರಿಸಬೇಕು. ಕಾಲೇಜುಗಳು ಸದರಿ ಪಟ್ಟಿಯನ್ನು ವಿಶ್ವವಿದ್ಯಾಲಯವು ಪರಿಶೀಲನೆಗೆ ಕೇಳಿದಾಗ ಸಲ್ಲಿಸಲು ಸಿದ್ಧರಿರಬೇಕು.

Rangaswamy B E

**ಕುಲಸಚಿವರು** 7/1/2021